# ರಾಜ್ಯಸಭಾ ಸಂಸದರು ಕೈಗೊಳ್ಳದ ರೈಲು ಬೆರ್ತ್ ಶುಲ್ಕ ವಸೂಲಿ

ನವದೆಹಲಿ : ರಾಜ್ಯಸಭಾ ಸಚಿವಾಲಯವು ರೈಲ್ವೆ ಸಚಿವಾಲಯಕ್ಕೆ ಪಾವತಿಗಳನ್ನು ಮಾಡಬೇಕಾಗಿದ್ದು, ಆ ಬುಕ್ಕಿಂಗ್‌ಗಳನ್ನು ಸಹ ಸದಸ್ಯರು ಬಳಸುವುದಿಲ್ಲ.ರಾಜ್ಯಸಭಾ ಸಂಸದರು ತಾವು ಕಾಯ್ದಿರಿಸಿದ ಆದರೆ ಕೈಗೊಳ್ಳದ ರೈಲು ಪ್ರಯಾಣದ ದರವನ್ನು ಈಗ ಪಾವತಿಸಬೇಕಾಗುತ್ತದೆ.
ಮುಂಚಿತವಾಗಿ ಬಳಸಬಹುದಾದ ಎಲ್ಲಾ ಬುಕಿಂಗ್ಗಳನ್ನು ರದ್ದುಗೊಳಿಸುವಂತೆ ಸದಸ್ಯರನ್ನು ಕೋರಲಾಗಿದೆ. ಸದಸ್ಯರು ನಿಜವಾಗಿಯೂ ಬಳಸದ ಬುಕಿಂಗ್ ಅನ್ನು ರದ್ದುಗೊಳಿಸದಿದ್ದಲ್ಲಿ, ಅಂತಹ ಬುಕಿಂಗ್‌ಗಳ ಶುಲ್ಕವನ್ನು ಸದಸ್ಯರಿಂದ ವಸೂಲಿ ಮಾಡಲಾಗುತ್ತದೆ.
ರಾಜ್ಯಸಭಾ ಅಧ್ಯಕ್ಷ ಎಂ.ವೆಂಕಯ್ಯ ನಾಯ್ಡು ಅವರೊಂದಿಗೆ, ಬಹು ಬುಕಿಂಗ್‌ಗಳ ವ್ಯಾಪ್ತಿ ಮತ್ತು ಅವುಗಳ ಪರಿಣಾಮಗಳನ್ನು ರಾಜ್ಯಸಭಾ ಸಚಿವಾಲಯವು ರಾಜ್ಯಸಭೆಯ ಮಾಜಿ ಸದಸ್ಯರು ಕೈಗೊಂಡ ಬುಕಿಂಗ್ ಮತ್ತು ನೈಜ ಪ್ರಯಾಣದ ಬಗ್ಗೆ ವಿಶ್ಲೇಷಣೆ ಮಾಡಿದೆ ಎಂದು ಮೂಲಗಳು ತಿಳಿಸಿವೆ.
ರಾಜ್ಯಸಭೆಯ ಮಾಜಿ ಸದಸ್ಯರೊಬ್ಬರು 2019 ರ ಜನವರಿಯಲ್ಲಿ 23 ದಿನಗಳಲ್ಲಿ ದಿನಕ್ಕೆ 4 ರವರೆಗೆ 63 ಬುಕಿಂಗ್‌ಗಳನ್ನು ಮಾಡಿದ್ದಾರೆ ಎಂದು ತಿಳಿದುಬಂದಿದೆ, ಒಟ್ಟು 69 1.69 ಲಕ್ಷ ವೆಚ್ಚವಾಗಿದೆ ಎಂದು ಅವರು ಹೇಳಿದರು.
ಒಟ್ಟು ಸಂಸದ ದರ ಕೇವಲ, 22,085 ರ ವಿರುದ್ಧ ಕೇವಲ 7 ಸಂದರ್ಭಗಳಲ್ಲಿ ಮಾತ್ರ ರೈಲಿನಲ್ಲಿ ಪ್ರಯಾಣಿಸಿದ್ದನ್ನು ಮಾಜಿ ಸಂಸದರು ಖಚಿತಪಡಿಸಿದ್ದಾರೆ, ಇದರರ್ಥ ರಾಜ್ಯಸಭಾ ಸಚಿವಾಲಯವು ಹೆಚ್ಚುವರಿ ಮೊತ್ತವನ್ನು 4 1,46,920 ಪಾವತಿಸಬೇಕಾಗುತ್ತದೆ, ಅಂದರೆ ಸುಮಾರು 87% ಒಟ್ಟು.
ಸದಸ್ಯರ ವಿಷಯದಲ್ಲಿ, ಸೆಕ್ರೆಟರಿಯಟ್ ನಡೆಸಿದ ವಿಶ್ಲೇಷಣೆಯು 2019 ರ ಜನವರಿಯಲ್ಲಿ ನಿಜವಾದ ಪ್ರಯಾಣವು ರೈಲ್ವೆಯ ಒಟ್ಟು ಹಕ್ಕಿನ ಕೇವಲ 15% ರಷ್ಟಿದೆ ಎಂದು ಬಹಿರಂಗಪಡಿಸಿದೆ, ಕಾರ್ಯಗಳು ನಡೆಯದಿದ್ದಕ್ಕಾಗಿ ಸಚಿವಾಲಯವು 85% ಹೆಚ್ಚುವರಿ ಹಣವನ್ನು ಪಾವತಿಸುವಂತೆ ಒತ್ತಾಯಿಸಿದೆ.
2019 ರ ಕ್ಯಾಲೆಂಡರ್ ವರ್ಷಕ್ಕೆ, ರೈಲ್ವೆ ರಾಜ್ಯಸಭಾ ಸಚಿವಾಲಯವು ಸಂಸದರು ಮತ್ತು ಮಾಜಿ ಸಂಸದರು, ಅವರ ಸಂಗಾತಿಗಳು ಮತ್ತು ಸಹಚರರಿಂದ ರೈಲು ಪ್ರಯಾಣದ ಒಟ್ಟು ವೆಚ್ಚದ 1/3 ನೇ ಪಾಲು ಎಂದು ? 7.8 ಕೋಟಿ ಬೇಡಿಕೆಯನ್ನು ಹೆಚ್ಚಿಸಿದೆ. ಒಟ್ಟು ವೆಚ್ಚದ ಉಳಿದ 2/3 ಭಾಗವನ್ನು ಲೋಕಸಭಾ ಸಚಿವಾಲಯ ಪಾವತಿಸಬೇಕಾಗುತ್ತದೆ.

# ಭೂ ಸುಧಾರಣಾಕಾಯ್ದೆಗೆತಿದ್ದುಪಡಿಯಿಂದ ಬಡ ಮತ್ತು ಮಧ್ಯಮರೈತರ ಕೃಷಿ ಭೂಮಿಗೆ ಮರಣ ಶಾಸನ

ಬಳ್ಳಾರಿ ಜೂನ್ 13. ಭೂ ಸುಧಾರಣಾಕಾಯ್ದೆಗೆತಿದ್ದುಪಡಿಯನ್ನುತಂದಿರುವಕರ್ನಾಟಕರಾಜ್ಯ ಸರ್ಕಾರಅಪ್ರಜಾತಾಂತ್ರಿಕ ನಡೆಯನ್ನು ಖಂಡಿಸಿ ರೈತ-ಕೃಷಿ ಕಾರ್ಮಿಕರ ಸಂಘಟನೆಯ (ಆರ್‌ಕೆಎಸ್)ರಾಜ್ಯಅಧ್ಯಕ್ಷರಾದಕಾಮ್ರೇಡ್ ಟಿ.ಎಸ್.ಸುನೀತ್‌ಕುಮಾರ್ ಹಾಗೂ ರಾಜ್ಯಕಾರ್ಯದರ್ಶಿಗಳಾದ ಕಾಮ್ರೇಡ್ ಹೆಚ್.ವಿ.ದಿವಾಕರ್ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ:

ಕೊರೊನಾ ಲಾಕ್‌ಡೌನ್‌ಹಿನ್ನೆಲೆ ಯಲ್ಲಿರೈತರುತತ್ತರಿಸುತ್ತಿರುವಾಗ, ಅವರ ನೆರವಿಗೆ ಬರಬೇಕಾದ ಸರ್ಕಾರರೈತರ ಭೂಮಿಯನ್ನೇ ಕಾರ್ಪೊರೇಟ್ ಕಂಪನಿಗಳ ಕಪಿಮುಷ್ಠಿಗೆ ಹಾಕುವಂತಹಭೂ ಸುಧಾರಣೆಕಾಯ್ದೆಯ 79 ಎ,ಬಿ ಮತ್ತು ಸಿ, 80ನೇ ಕಲಮುಗಳನ್ನು ಪೂರ್ವಾನ್ವಯವಾಗುವಂತೆ ರದ್ದುಗೊಳಿಸಿರುವುದುಅತ್ಯಂತಖಂಡನೀಯ ಹಾಗೂ ರೈತ ವಿರೋಧಿ ನಡೆಎಂದುರೈತ-ಕೃಷಿಕಾರ್ಮಿಕರ ಸಂಘಟನೆ (ಆರ್‌ಕೆಎಸ್) ಭೂ ಸುಧಾರಣಾಕಾಯ್ದೆಗೆತಂ ದಿರುವತಿದ್ದುಪಡಿಯನ್ನುತೀವ್ರವಾಗಿ ವಿರೋಧಿಸುತ್ತದೆ.ಕೃಷಿಯೇತರ'ಆದಾಯದಿಂದ ಕೃಷಿ ಭೂಮಿಯನ್ನು ಕೊಳ್ಳಲು ನಿರ್ಬಂಧ ಹೇರಿದ್ದ ಮೇಲಿನ ಕಲಮುಗಳನ್ನು ರದ್ದುಗೊಳಿಸಿ, ಕಾರ್ಪೊರೇಟ್ ಕಂಪನಿಗಳಿಂದ ಶ್ರೀಮಂತರವರೆಗೆ ಯಾರೂ ಬೇಕಾದಾರೂ ಭೂಮಿಯನ್ನು ಕೊಳ್ಳಲು ಮುಕ್ತ ಪರವಾನಿಗೆ ನೀಡಿರೈತರ ಹೆಸರಿನಲ್ಲಿಅಧಿಕಾರದಗದ್ದುಗೆಯೇರಿದರಾಜ್ಯ ಸರ್ಕಾರವು ವಿಶ್ವಾತಘಾತಕತನವನ್ನು ಮೆರೆದಿದೆ.

ಈಗಾಗಲೇ ಬೆಳೆಹಾನಿ, ಅತಿವೃಷ್ಟಿ, ಅನಾವೃಷ್ಟಿ, ಬೆಲೆ ಕುಸಿತ, ರೋಗ, ಮುಂತಾದ ಹತ್ತು ಹಲವು ಬವಣೆಗಳಿಂದ ಬೆಂಡಾಗಿರುವ 'ನೇಗಿಲ ಯೋಗಿ'ಯ ಬದುಕನ್ನು ಉಳಿಸಲು ಯೋಜನೆ ಮಾಡಬೇಕಾದ ಸರ್ಕಾರ ಅವನ ಜೀವಸೆಲೆಯಾದಜಮೀನನ್ನುಅಗರ್ಭ ಶ್ರೀಮಂತರ ಮಡಿಲಿಗೆ ಹಾಕಿ ಜೀವನೋಪಾಯವನ್ನೇ ಕಸಿದು ಕೊಂಡಿದೆ.ಇದು ಕೃಷಿ ಭೂಮಿಯನ್ನುಕಾರ್ಪೊರೇಟ್ ಕಂಪೆನಿಗಳು ರೆಸಾರ್ಟ್, ಮೋಜಿನ ಕೇಂದ್ರಗಳು, ಹೋಟೆಲ್ ಹಾಗೂ ರಿಯಲ್‌ಎಸ್ಟೇಟ್ ಉದ್ಯಮಗಳಿಗೂ ಬಳಸಲುಈಗಿದ್ದ ಅಡೆತಡೆಗಳನ್ನೆಲ್ಲಾ ತೆಗೆದು ಹಾಕಿದೆ.ಜೊತೆಗೆ, ಅಂಬಾನಿ, ಅದಾನಿಗಳಂತಹ ವಿಶ್ವದ ಅತೀ ಶ್ರೀಮಂತರ ಬಳಿ ಕೊಳೆಯುತ್ತಿರುವ ಬಂಡವಾಳದ ಹೊಳೆಯನ್ನು ಕೃಷಿಯಕಡೆ ಹರಿಸಲು ಬೇಕಾದ ಸಾವಿರಾರುಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲೂ ಅನುಕೂಲವಾಗಿದೆ.

ಇದರಿಂದ, ಮುಂದೆ ಬರುವ ದಿನಗಳಲ್ಲಿ ಕೋಟ್ಯಾಂತರರೈತರು ಬೀದಿ ಪಾಲಾಗುತ್ತಾರೆ.ಕೃಷಿಯ ಫಲವತ್ತಾದ ಭೂಮಿಯನ್ನುಅನ್ಯ ಉದ್ಯಮಗಳಿಗೆ ನೀಡುತ್ತಾ ಹೋದಂತೆ ಕೃಷಿ ಉತ್ಪನ್ನಗಳನ್ನು ಬೆಳೆಯುವುದು ಕಡಿಮೆಯಾಗುತ್ತದೆ.ಒಟ್ಟಾರೆಯಾಗಿಕೃಷಿ ಉತ್ಪನ್ನಗಳ ಉತ್ಪಾದನೆ ಇಳಿಮುಖವಾದರೆ ಆಹಾರದಕೊರತೆಯುಂಟಾಗಿ ಹಾಹಾಕಾರವೇಳುತ್ತದೆ.ಒಂದುಕಡೆ, ಜನ ಸಾಮಾನ್ಯರು ಕೃಷಿ ಉತ್ಪನ್ನಗಳಿಗೆ ಆಮದಿನ ಮೇಲೆ ಅವಲಂಬಿತವಾಗಬೇಕಾಗುತ್ತದೆ.ಆಗ ರಫ್ತು ವ್ಯಾಪಾರಗಾರರಿಗೆ ವಿಪರೀತ ಲಾಭ ಬರುತ್ತದೆ.ಇನ್ನೊಂದು ಕಡೆ,ಬಂಡವಾಳಿಗರು ಸಾವಿರಾರು ಎಕರೆಗಳ ಒಡೆಯರಾಗಿಕೃಷಿಯನ್ನು ಉದ್ಯಮವನ್ನಾಗಿ ಪರಿವರ್ತಿಸಿ ಕೃಷಿ ಉತ್ಪನ್ನಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡುಕೃತಕಅಭಾವವನ್ನು ಸೃಷ್ಟಿಸಿ, ಅಧಿಕ ಲಾಭಕ್ಕೆ ಮಾರುತ್ತರೆ.ಎರಡೂ ಸಂದರ್ಭಗಳಲ್ಲೂ ಯಾವುದೇ ಪರ್ಯಾಯವಿಲ್ಲದೆ, ಬೆಲೆ, ಉತ್ಪಾದನೆ, ಯಾವುದರಲ್ಲೂ ಸರ್ಕಾರದ ನಿಯಂತ್ರಣವಿಲ್ಲದೆ ಗ್ರಾಹಕರುಕೃಷಿ ಉತ್ಪನ್ನಗಳನ್ನು ಅತ್ಯಧಿಕ ಬೆಲೆಗೆ ಕೊಳ್ಳಲೇಬೇಕಾದ ಸ್ಥಿತಿ ಬರುತ್ತದೆ.ಇದು ಕೃಷಿ ಉತ್ಪನ್ನಗಳ ಉತ್ಪಾದನೆಯಕಾರ್ಪೊರೇಟರೀಕರಣಕ್ಕೆ, ಖಾಸಗಿ ಮಾಲೀಕತ್ವಕ್ಕೆದಾರಿ ಮಾಡಿಕೊಡುತ್ತದೆ.ಇದಕ್ಕೆ ಪೂರಕವಾಗಿ, ಖಾಸಗಿ ಮಾರುಕಟ್ಟೆತೆರೆಯಲುಹಾಗೂ ವ್ಯಾಪಾರಗಳ (ಚಿಲ್ಲರೆ ಮತ್ತು ಸಗಟು) ಮುಕ್ತ ವ್ಯವಹಾರ ನಡೆಸಲು ಎಪಿಎಂಸಿ ಕಾಯ್ದೆಗೂ ತಿದ್ದಪಡಿಗಳನ್ನು ತರಲಾಗಿದೆ.ಹಾಗೆಯೇಅಗತ್ಯ ವಸ್ತುಗಳ ಪಟ್ಟಿಯಿಂದಜನರಿಗೆ ಅತ್ಯಂತಅಗತ್ಯವಾದ ಬೇಳೆ, ಎಣ್ಣೆ, ಕಾಳುಗಳನ್ನು ತೆಗೆದು ಹಾಕಿ ಯದ್ವಾತದ್ವಾ ಬೆಲೆ ನಿಗದಿ ಮಾಡಲೂ ಅನುಕೂಲ ಮಾಡಿಕೊಡ ಲಾಗಿದೆ.ಜೊತೆಗೆ, ಇಲ್ಲಿಜನರ, ಅಂದರೆ ಸಾಮಾಜಿಕಅವಶ್ಯಕ ತೆಗೆಅನುಗುಣವಾಗಿಯಾವ ಬೆಳೆ ಬೆಳೆಯಬೇಕೆನ್ನುವುದು ನಿರ್ಧಾರವಾಗು ವುದಿಲ್ಲ. ಬದಲಿಗೆಅತ್ಯಧಿಕ ಲಾಭ, ರಫ್ತಿಗೆ ಪೂರಕವಾದ ವಿದೇಶಗಳಲ್ಲಿ ಬೇಡಿಕೆಗಳು ಬೆಳೆಯುವ ಬೆಳೆಗಳನ್ನು ನಿರ್ಧರಿಸುತ್ತವೆ.

ಇದರಿಂದಾಗಿಜನ ಸಾಮಾನ್ಯರುಅಗತ್ಯ ವಸ್ತುಗಳಿಗೆ ವಿಪರೀತ ಬೆಲೆ ತೆರುವಕಠಿಣ ಸ್ಥಿತಿ ಬರುತ್ತದೆ.ಕೊರೊನಾ ಲಾಕ್‌ಡೌನ್ ಸಂದರ್ಭವನ್ನು ದುರುಪಯೋಗಪಡಿಸಿಕೊಂಡು, ಸಂಬಂಧಪಟ್ಟವರೊಂದಿಗೆಚರ್ಚಿಸುವುದಿರಲಿ, ಸುಗ್ರೀವಾಜ್ಞೆಗಳ ಮೂಲಕ ಹಲವಾರು ಕೃಷಿ ಸಂಬಂಧಿತ ಕಾಯ್ದೆಗಳಿಗೆ ರೈತರಿಗೆ ಮಾರಕವಾಗು ವತಿದ್ದುಪಡಿ ಮಾಡುವುದರಲ್ಲಿಕೇಂದ್ರ ಮತ್ತುರಾಜ್ಯ ಸರ್ಕಾರಗಳು ಮುಳುಗಿರುವುದು ಪ್ರಜಾತಂತ್ರದ ಕಗ್ಗೊಲೆ ಹಾಗೂ ಅನೈತಿಕ.ಆದ್ದರಿಂದ, ಕೃಷಿ ಹಾಗೂ ಕೃಷಿಕರ ಮೇಲೆ ವಿನಾಶಕಾರಿ ಪರಿಣಾಮಗಳನ್ನು ಬೀರುವ, ರೈತರ, ಗ್ರಾಹಕರ ಹಾಗೂ ಜನ ಸಾಮಾನ್ಯರ ಹಿತಗಳನ್ನು ಬಲಿ ಕೊಡುವ ಭೂ ಸುಧಾರಣಾಕಾಯ್ದೆಯ ತಿದ್ದುಪಡಿಗಳನ್ನು ಹಿಂದಕ್ಕೆ ತೆಗೆದುಕೊಳ್ಳುವರೆಗು ರೈತರು ಪ್ರಬಲ ಚಳುವಳಿಯನ್ನು ಬೆಳೆಸಲು ಮುಂದೆ ಬರಬೇಕೇಂದು ಆರ್‌ಕೆಎಸ್‌ಕರೆ ನೀಡುತ್ತದೆ ಎಂದರು.

# ಸವಿತಾ ಸಮಾಜ ಸುಧಾರಣೆಗೆ ಸಂಘಟಕರು ಶ್ರಮಿಸಲು ಕೃಷ್ಣಾ ಹಡಪದ ಕರೆ



ಗದಗ 13: ಸವಿತಾ ಸಮಾಜದ ಸುಧಾರಣೆಗಾಗಿ ಸಂಘಟಕರು ಶ್ರಮಿಸಬೇಕು ಈ ನಿಟ್ಟಿನಲ್ಲಿ ನರಗುಂದ ತಾಲೂಕ ಸವಿತಾ ಸಮಾಜದ ಸಂಘಟಕರು ಉತ್ತಮ ಸಂಘಟನಾ ಕಾರ್ಯಕ್ರಮಗಳು ಹಮ್ಮಿಕೊಳ್ಳುವ ಅಗತ್ಯವಿದೆ ಎಂದು ಗದಗ ಜಿಲ್ಲಾ ಸವಿತಾ ಸಮಾಜದ ಜಿಲ್ಲಾಧ್ಯಕ್ಷರಾದ ಕೃಷ್ಣಾ ಹೆಚ್. ಹಡಪದ ಹೇಳಿದರು.

ಗದಗ ಜಿಲ್ಲಾ ಸವಿತಾ ಸಮಾಜದ ಪದಾಧಿಕಾರಿಗಳು ಮತ್ತು ಸಮಾಜದ ಗದಗ-ನರಗುಂದ ತಾಲೂಕಿನ ಹಿರಿಯರು ಹಾಗೂ ನರಗುಂದ ನಗರದ ಸಮಾಜ ಬಾಂಧವರ ಉಪಸ್ಥಿತಿಯಲ್ಲಿ ಜರುಗಿದ ಗದಗ ಜಿಲ್ಲಾ ಸವಿತಾ ಸಮಾಜದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಭಾಗವಹಿಸಿದ ಸಮಾಜದ ಎಲ್ಲ ಬಾಂಧವರ ನಿರ್ಣಯದಂತೆ ನರಗುಂದ ತಾಲೂಕ ಸವಿತಾ ಸಮಾಜದ ಅಧ್ಯಕ್ಷರನ್ನಾಗಿ ಶ್ರೀನಿವಾಸ ಲಂಕಾಲ, ಉಪಾಧ್ಯಕ್ಷರಾಗಿ ಸಂದೀಪ ಬಾಲಗುಡ್ಡರವರನ್ನು ಜಿಲ್ಲಾಧ್ಯಕ್ಷರಾದ ಕೃಷ್ಣಾ ಹೆಚ್ ಹಡಪದರವರು ನೇಮಕ ಮಾಡಿ ಆದೇಶ ಪತ್ರ ನೀಡಿ ನೂತನ ಪದಾಧಿಕಾರಿಗಳಿಗೆ ಸನ್ಮಾನಿಸಿ ಶುಭ ಕೋರಿ ಮಾತನಾಡಿ ಸರ್ಕಾರದ ಯೋಜನೆಗಳು ಸವಿತಾ ಸಮಾಜದ ಬಡವರ ಮನೆಬಾಗಿಲನ್ನು ತಲುಪುವಂತಾಗಬೇಕು ಈ ನಿಟ್ಟಿನಲ್ಲಿ ನೂತನ ಪದಾಧಿಕಾರಿಗಳು ಸಂಘಟಕರು ಉತ್ತಮ ಸೇವೆ ಸಲ್ಲಿಸಬೇಕೆಂದು ಕೃಷ್ಣಾ ಎಚ್. ಹಡಪದ ಹೇಳಿದರು.

ನರಗುಂದ ತಾಲೂಕ ಸವಿತಾ ಸಮಾಜದ ನೂತನ ಅಧ್ಯಕ್ಷರಾದ ಶ್ರೀನಿವಾಸ ಲಂಕಾಲ್ ಮತ್ತು ಉಪಾಧ್ಯಕ್ಷರಾದ ಬಾಲಗುಡ್ಡ ಮಾತನಾಡಿ ತಮ್ಮ ಅಧಿಕಾರ ಅವಧಿಯಲ್ಲಿ ನರಗುಂದ ತಾಲೂಕ ಸವಿತಾ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಸಮಾಜದ ಹಿರಿಯರ, ಮಾರ್ಗದರ್ಶನ ಮೇರೆಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.ಈ ಸಂದರ್ಭದಲ್ಲಿ ನೂತನವಾಗಿ ರಾಜ್ಯಸಭಾ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾದ ಸವಿತಾ ಸಮಾಜದ ಹಿರಿಯರಾದ ಅಶೋಕ ಗಸ್ತಿಯವರಿಗೆ ಅಭಿನಂದಿಸಲಾಯಿತು. ಅವರ ಆಯ್ಕೆಗೆ ಶ್ರಮಿಸಿದ ಬಿಜೆಪಿ ಪಕ್ಷಕ್ಕೆ ಹಾಗೂ ಪಕ್ಷದ ಎಲ್ಲಾ ನಾಯಕರುಗಳಿಗೆ ಸಭೆಯ ಮೂಲಕ ಕೃತಜ್ಞತೆಗಳನ್ನು ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ಸವಿತಾ ಸಮಾಜದ ಜಿಲ್ಲಾ ಕಾರ್ಯಾಧ್ಯಕ್ಷರಾದ ಹನಮಂತಪ್ಪ ರಾಂಪೂರ, ಹಿರಿಯರಾದ ಬಾಲರಾಜ ಕೊಟೆಕಲ್ಲ, ಹನಮಂತ ಶ್ರೀರಾಮನಗರ, ರಮೇಶ ರಾಂಪೂರ, ಗದಗ ತಾಲೂಕ ಅಧ್ಯಕ್ಷರಾದ ಆಂಜನೇಯ ಆದೋನಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿಲೀಪ ಸಾಳೂಂಕೆ, ಜಿಲ್ಲಾ ಪ್ರತಿನಿಧಿ ನವೀನ ಕೋಟೆಕಲ್ಲ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ವಿಕಾಸ ಕ್ಷೀರಸಾಗರ, ಗದಗ ಜಿಲ್ಲಾ ಸವಿತಾ ಸಮಾಜದ ಯುವಕ ಸಂಘದ ಜಿಲ್ಲಾಧ್ಯಕ್ಷರಾದ ವಿನೋದ ಕಡಿಮೆಟ್ಲು, ಸಮಾಜದ ಯುವ ನಾಯಕರುಗಳಾದ ಬಾಲು ಲಂಕಾಲ್, ಕೃಷ್ಣಾ ಬೂದೂರ, ವೆಂಕಟೇಶ ಬಾಲಗುಡ್ಡ, ಹಾಗೂ ಗದಗ-ನರಗುಂದ ಸವಿತಾ ಸಮಾಜದ ಗುರು-ಹಿರಿಯರು, ಬಾಂಧವರು ಇತರರು ಉಪಸ್ಥಿತರಿದ್ದರು.

# ಗದಗ ಜಿಲ್ಲೆ: 3 ಜನ ಸೋಂಕಿತರು ಗುಣಮುಖ



ಗದಗ.ಜೂನ್.13: ಕೋವಿಡ್-19 ಸೋಂಕಿನಿಂದ ಗುಣಮುಖರಾದ ಒಟ್ಟು 3 ಜನ ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಕೋವಿಡ್-19 ನಿಗದಿತ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಬಿಡುಗಡೆ ಆದವರು. ಪಿ-5015, ಪಿ-5016 ಹಾಗೂ ಪಿ.5017 ಇವರು ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದಾರೆ. ಮುಂದಿನ 14 ದಿನಗಳ ಕಾಲ ಮನೆಯಲ್ಲಿಯೇ ಪ್ರತ್ಯೇಕ ನಿಗಾದಲ್ಲಿ ಇರುವರು. ಅವರ ಕುರಿತು ಆರೋಗ್ಯ ಕಾರ್ಯಕರ್ತರು ನಿರಂತರ ನಿಗಾವಹಿಸಲಿದ್ದಾರೆ.

# ಎಪಿಎಂಸಿ ಅಧ್ಯಕ್ಷರಾಗಿ ಬೆಸೇಜ ರೆಡ್ಡಿ ನೇಮಕ- ಕೃ.ಉ.ಮಾ.ಸ ಯನ್ನು ಅಭಿವೃದ್ಧಿಗೊಳಿಸಲು ನನ್ನ ಶಕ್ತಿ ಮೀರಿ ಕೆಲಸ ಮಾಡುವೆ- ಬೆಸೇಜ್ ರೆಡ್ಡಿ



ಬಳ್ಳಾರಿ ಜೂನ್ 13. ಬಳ್ಳಾರಿ ಎಪಿಎಂಸಿ ಅಧ್ಯಕ್ಷರಾಗಿ ಕೊರ್ಲಗುಂದಿಯ ಬೆಸೇಜ್ ರೆಡ್ಡಿ ಅಧಿಕಾರ ಸ್ವೀಕಾರ ಮಾಡಿದ್ದಾರೆ. ನಮ್ಮ ಪ್ರತಿನಿಧಿಯೊಂದಿಗೆ ಅವರು ಮಾತನಾಡುತ್ತಾ ನಾನು ಅಧ್ಯಕ್ಷನಾಗಿರೋದು ರೈತರ ಹಿತ ದೃಷ್ಟಿಯನ್ನು ಕಾಪಾಡಲು, ರೇತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನ ಮೇಲಿದೆ ಎಂದರು. ಎಪಿಎಂಸಿಯನ್ನು ಮುಂಬರುವ ದಿನಗಳಲ್ಲಿ ಒಳ್ಳೆಯ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ನನ್ನ ಶಕ್ತಿಯನ್ನು ಮೀರಿ ಶ್ರಮಿಸುತ್ತೇನೆ ಎಂದರು. ಈಗಾಗಲೇ ಒಣ ಮೇಣಶಿನಕಾಯಿಯ ಮಾರ್ಕೆಟ್‌ಗೆ 27 ಎಕರೆ ಭೂಮಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು ನೀಡಿದ್ದಾರೆ. ಅದನ್ನು ಅತೀ ಶೀಘ್ರದಲ್ಲೇ ಚಾಲ್ತಿಯಲ್ಲಿ ತರುತ್ತೇವೆ ಎಂದರು.

ಇದಕ್ಕೆ ನಮ್ಮ ಮಾರುಕಟ್ಟೆಯ ಎಲ್ಲಾ ವ್ಯಾಪಾರಸ್ಥರು ನನಗೆ ಸಹಕರಿಸ ಬೇಕಾಗಿ ಕೋರುತ್ತೇನೆ ಎಂದರು. ಈಗ ಸದ್ಯದಲ್ಲಿ ತರಕಾರಿ ಮಾರುಕಟ್ಟೆಯ ಅಭಿವೃದ್ಧಿ ಕೆಲಸ ಆಗಬೇಕಿದೆ, ಇದು ಸರಕಾರದ ದೃಷ್ಟಿಗೆ ತಂದಿದ್ದೇನೆ ತ್ವರಿತ ಗತಿಯಲ್ಲಿ ಪರಿಷ್ಕಾರವಾಗಲಿದೆ ಎಂದರು.

ಈಗ ಸತತ 15 ವರ್ಷಗಳಿಂದ ನೆನೆಗುದಿಗೆ ಬಿದ್ದ ತರಕಾರಿ ಮಾರ್ಕೆಟ್‌ನ ಸೈಟ್ ಹಂಚಿಕೆಯ ವಿಷಯವನ್ನು (56 ಸೈಟ್‌ಗಳ) ಸರಕಾರಕ್ಕೆ ಕಳುಹಿಸಿದ್ದೇವೆ , ಇದನ್ನು ಕೈಬಿಡದೇ ನಾನು ಬೆಂಗಳೂರಲ್ಲೇ ಠಿಕಾಣೆ ಹಾಕಿ ಕೆಲಸವನ್ನು ಮಾಡಿಸಿಕೊಂಡು ಬರುತ್ತೇನೆ ಎಂದು ಭರವಸೆಯನ್ನು ನೀಡಿದರು. ನನಗೆ ಅಧ್ಯಕ್ಷನಾಗಲು ಸಹಕರಿಸಿದ ಎಲ್ಲಾ ಬಿಜೆಪಿ ಮುಖಂಡರಿಗೆ ಮತ್ತು ನನ್ನ ಹಿತೈಶಿಗಳಿಗೆ ಶುಭಾಶಯಗಳನ್ನು ಕೋರುತ್ತೇನೆ ಎಂದು ತಿಳಿಸಿದರು.

# ಜಲನಗರದ ಪೊಲೀಸ್ ಸಿಬ್ಬಂದಿಗೆ ಕೋವಿಡ್-19 ಪಾಸಿಟಿವ್ ಸೋಂಕು ದೃಢ



ವಿಜಯಪುರ.ಜೂ.13: ವಿಜಯಪುರ ನಗರದಲ್ಲಿ ಇಂದು ದಿನಾಂಕ 13-06-2020 ರಂದು ಜಲನಗರ ಪೊಲೀಸ್ ಠಾಣೆಯ ಸಿಬ್ಬಂದಿ ರೋಗಿ ಸಂಖ್ಯೆ : 6586 ಇವರಿಗೆ ಕೋವಿಡ್-19 ಪಾಸಿಟಿವ್ ಸೋಂಕು ತಗುಲಿರುವುದು ದೃಢಪಟ್ಟಿದ್ದು, ಅವರನ್ನು ನಿಗದಿತ ಆಸ್ಪತ್ರೆಗೆ ಚಿಕಿತ್ಸೆ ದಾಖಲಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅನುಪಮ್ ಅಗರವಾಲ್ ತಿಳಿಸಿದ್ದಾರೆ.

ಈ ಪ್ರಯುಕ್ತ ಜಲನಗರ ಪೊಲೀಸ್ ಠಾಣೆಯನ್ನು ಪಕ್ಕದ ಕಲ್ಯಾಣ ಮಂಟಪಕ್ಕೆ ಸ್ಥಳಾಂತರಿಸಲಾಗಿದ್ದು, ಈ ಪೊಲೀಸ್ ಸಿಬ್ಬಂದಿಯ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕ ಹೊಂದಿದವರನ್ನು ಗುರುತಿಸಿ, ಕ್ವಾರಂಟೈನ್‌ನಲ್ಲಿಡಲಾಗಿದ್ದು, ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ ಎಂದು ಅವರು ತಿಳಿಸಿದ್ದಾರೆ.

ಅದರಂತೆ ಕೋವಿಡ್-19 ಹಿನ್ನೆಲೆಯಲ್ಲಿ ವಿಜಯಪುರ ಶಹರದ ಗೋಲಗುಂಬಜ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಕಂಟೇನ್ಮೆಂಟ್ ಜೋನ್ ಅಲ್ಲದೇ ಸದರಿಯ ಪ್ರಕಾರ ಕರ್ತವ್ಯ ನಿಯೋಜಿಸಲಾಗುತ್ತಿದ್ದು,

ಇಲ್ಲಿಯವರೆಗೆ ಕಂಟೇನ್ಮೆಂಟ್ ಜೋನ್, ಚೆಕ್‌ಪೋಸ್ಟ್‌ಮ ನಿಗದಿತ ಆಸ್ಪತ್ರೆ, ಹಾಗೂ ಇತರೆ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳ ಪೈಕಿ ಒಟ್ಟು 217 ಜನರ ಸ್ವಾಬ್ ಸ್ಯಾಂಪಲ್ ಸಂಗ್ರಹಿಸಿ ಕೋವಿಡ್ -19 ಪರೀಕ್ಷೆಗೆ ಕಳುಹಿಸಲಾಗಿತ್ತು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ಮತ್ತೆ 6 ಜನರಿಗೆ ಕೋವಿಡ್-19 ಸೋಂಕು ದೃಢ:ಜಿಲ್ಲಾಧಿಕಾರಿ



ವಿಜಯಪುರ.ಜೂ.13: ವಿಜಯಪುರ ಜಿಲ್ಲೆಯಲ್ಲಿ ಈವರೆಗೆ ಒಟ್ಟು 228 ಕೋವಿಡ್-19 ಪಾಸಿಟಿವ್ ತಗುಲಿರುವುದು ದೃಢಪಟ್ಟಿದ್ದು, ಅದರಲ್ಲಿ ಇಂದು 6 ಜನರಿಗೆ ಸೋಂಕು ತಗುಲಿದೆ. ಈ ಪೈಕಿ ಕಂಟೇನ್ಮೆಂಟ್ ಜೋನ್ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ನಗರದ ಜಲನಗರ ಪೊಲೀಸ್ ಠಾಣೆಯ ಸಿಬ್ಬಂದಿಗೆ ಕೋವಿಡ್-19 ಪಾಸಿಟಿವ್ ತಗುಲಿರುವುದು ದೃಢಪಟ್ಟಿದೆ ಎಂದು ಜಿಲ್ಲಾಧಿಕಾರಿ ವೈ.ಎಸ್ ಪಾಟೀಲ ಅವರು ತಿಳಿಸಿದ್ದಾರೆ.

ಈ ಕುರಿತು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿಂದು ಸುದ್ದಿಗೋಷ್ಠಿ ನಡೆಸಿ, ಮಾಧ್ಯಮ ಪ್ರತಿನಿಧಿಗಳಿಗೆ ಈಗಾಗಲೇ ಆ ಪೊಲೀಸ್ ಸಿಬ್ಬಂದಿಯ ಸಂಪರ್ಕದಲ್ಲಿದ್ದ 20-22 ಜನ ಪೊಲೀಸ್, ಅಧಿಕಾರಿಗಳ ಸ್ವಾಬ್ ಟೆಸ್ಟ್ ಸಂಗ್ರಹಿಸಲಾಗಿದ್ದು, ಜಲನಗರ ಪೊಲೀಸ್ ಠಾಣೆಯನ್ನು ಸೀಲ್‌ಡೌನ್ ಮಾಡಿ, ಹತ್ತಿರದ ಮಂಗಲ ಕಾರ್ಯಾಲಯಕ್ಕೆ ಸ್ಥಳಾಂತರಿಸಲಾಗಿದೆ.
ಅವರೊಂದಿಗೆ ಪ್ರಾಥಮಿಕ ಸಂಪರ್ಕದಲ್ಲಿದ್ದವರ ಸ್ವ್ಯಾಬ್ ಟೆಸ್ಟ್ ಬಂದ ಮೇಲೆ ಮಹಾನಗರ ಪಾಲಿಕೆಯಿಂದ ಠಾಣೆಯನ್ನು ಸೋಂಕು ರಹಿತವಾಗಿಸುವುದರ ಜೊತೆಗೆ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

# ಕರೋನಾ ಗಂಭೀರವಾಗಿ ಪರಿಗಣಿಸದಿದ್ದರೆ ಗಂಭೀರ ಪರಿಣಾಮ ಸಾಧ್ಯತೆ : ಡಾ.ನೂರಾನಿ



ಗದಗ, ಜೂ. 13 : ಕರೋನಾ ಸೋಂಕು ಬಗ್ಗೆ ಸಾರ್ವಜನಿಕರು ಗಂಭೀರವಾಗಿ ಪರಿಗಣಿಸದಿದ್ದಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ ಗಂಭೀರ ಪರಿಣಾಮ ಎದುರಿಸಬೇಕಾದೀತು ಎಚ್ಚರ ಎಂದು 'ನೂರಾನಿ ಟ್ರಸ್ಟ ಜಹರಾ ಪೌಂಡೇಶನ್' ಅಧ್ಯಕ್ಷರೂ ವೈದ್ಯರೂ ಆದ ಡಾ.ಪ್ಯಾರಅಲಿ ನೂರಾನಿ ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ಮಹಾಮಾರಿ ಕರೋನಾ ಬಗ್ಗೆ ಸಾರ್ವಜನಿಕರು ವಹಿಸಬೇಕಾದ ಮುಂಜಾಗ್ರತಾ ಕ್ರಮ, ಪಾಲಿಸಬೇಕಾದ ನಿಯಮಗಳನ್ನು ಈಗಾಗಲೇ ಪ್ರಧಾನಮಂತ್ರಿ, ಮುಖ್ಯಮಂತ್ರಿ, ಆರೋಗ್ಯ ಇಲಾಖೆ, ಜಿಲ್ಲಾಡಳಿತ ಸಾಕಷ್ಟು ಸಲ ಹೇಳಿದಾಗಲೂ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿರುವದು ದುರಂತವನ್ನು ಆಹ್ವಾನಿಸಿದಂತಿದೆ, ಈ ಅಸಡ್ಡೆ ತಪ್ಪಬೇಕು.

ಮಾರುಕಟ್ಟೆ, ಬಸ್‌ನಿಲ್ದಾಣ, ಬ್ಯಾಂಕ್, ಹೊಟೇಲ್, ಸರಕಾರಿ ಮತ್ತು ಖಾಸಗಿ ಕಾರ್ಯಾಲಯಗಳು ಸೇರಿದಂತೆ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಜನತೆ ಸಾಮಾಜಿಕ ಅಂತರ ಕಾಯ್ದುಕೊಳ್ಳದಿರುವದು, ಮುಖಕ್ಕೆ ಮಾಸ್ಕ ಧರಿಸದಿರುವದು ಹಾಗೂ ಸ್ಯಾನಿಟೈಜರ್ ಬಳಸದಿರುವದನ್ನು ನಾವೆಲ್ಲರೂ ಕಾಣಬಹುದಾಗಿದೆ. ಲಾಕ್‌ಡೌನ್ ಸಂಪೂರ್ಣವಾಗಿ ಸಡಿಲಿಕೆ ಆಗಿದೆ ಎಂದರೆ ಕರೋನಾ ಸಂಪೂರ್ಣವಾಗಿ ಹೋಗಿದೆ ಎಂದರ್ಥವಲ್ಲ. ಲಾಕ್‌ಡೌನ್ ನಮ್ಮೆಲ್ಲರ ಜೀವನದಲ್ಲಿ ಹೇಗೆ ಬದುಕಬೇಕೆಂಬುದನ್ನು ಪಾಠ ಕಲಿಸಿದೆ ಆ ಪಾಠವನ್ನು ಮುಂದಿಟ್ಟುಕೊಂಡು ನಾವಿಂದು ನಮ್ಮ ಜೀವನ ಶೈಲಿಯನ್ನು ಬದಲಿಸಿಕೊಳ್ಳಬೇಕಿದೆ. ಕರೋನಾ ಬಗ್ಗೆ ಭಯ ಬೇಡ ಆದರೆ ಮುಂಜಾಗ್ರತಾ ಕ್ರಮ ತೀರಾ ಅವಶ್ಯ ಹಾಗೂ ಅನಿವಾರ್ಯವಿದೆ.

ಕರೋನಾ ಸಂಪೂರ್ಣವಾಗಿ ನಾಶ ಆಗುವವರೆಗೂ ನಮ್ಮ ಜೀವನದಲ್ಲಿ ಮುಂಜಾಗ್ರತಾ ಕ್ರಮಗಳನ್ನು ಅಳವಡಿಸಿಕೊಂಡು ಅವುಗಳನ್ನು ಪರಿಪಾಲಿಸಿಕೊಂಡು ಮುನ್ನಡೆಯಬೇಕಿದೆ ಆ ಒಂದು ವಿಶ್ವಾಸದಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಲಾಕ್‌ಡೌನ್‌ನ್ನು ಸಂಪೂರ್ಣವಾಗಿ ಸಡಿಲಿಕೆ ಮಾಡಿದ್ದು, ಕರೋನಾ ಹೊಡೆದೊಡಿಸುವ ಪ್ರಯತ್ನಕ್ಕೆ ನಾವೆಲ್ಲ ಕಂಕಣಬದ್ಧರಾಗಬೇಕಿದೆ/

ವೈದ್ಯರು, ಆರೋಗ್ಯ ಕೇಂದ್ರದ ತಂಡದವರು ಸರಕಾರದ ಆದೇಶದಂತೆ ಸರ್ವ ಜನಾಂಗದ ಆರೋಗ್ಯ ರಕ್ಷಣೆಗೆ ಹಗಲು ರಾತ್ರಿ ಎನ್ನದೇ ತಮ್ಮ ಕುಟುಂಬವನ್ನು ಬಿಟ್ಟು ಜೀವದ ಹಂಗು ತೊರೆದು ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದಾರೆ. ಸಾರ್ವಜನಿಕರು ಈ ಗಂಭೀರತೆಯನ್ನು ಮರೆತು ಅಸಡ್ಡೆ ಅಲಕ್ಷ ಮಾಡಿದರೆ ಬರಲಿರುವ ದಿನಗಳಲ್ಲಿ ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾದೀತು. ಆಗ ವೈದ್ಯರ ಸೇವೆಯ ಬಲ ಸಾಕಾಗದೇ ಇರಬಹುದು, ಆಸ್ಪತ್ರೆಗಳಲ್ಲಿ ಉಪಚಾರ ಹೊಂದಲು ಆಗದಿರಬಹುದು ಅಂತಹ ಪರಿಸ್ಥಿತಿ ತಂದುಕೊಳ್ಳದೇ ಕೋವಿಡ್ ಮಾರ್ಗಸೂಚಿಗಳನ್ನು ಗೌರವಿಸಿ ಪಾಲಿಸುವದು ಎಂದಿಗಿಂತ ಇಂದು ಅವಶ್ಯವಿದೆ ಇದಕ್ಕೆ ಸಾರ್ವಜನಿಕರು ಸ್ಪಂದಿಸಬೇಕೆಂದು 'ನೂರಾನಿ ಟ್ರಸ್ಟ ಜಹರಾ ಪೌಂಡೇಶನ್' ಅಧ್ಯಕ್ಷರೂ ವೈದ್ಯರೂ ಆದ ಡಾ.ಪ್ಯಾರಅಲಿ ನೂರಾನಿ ಮನವಿ ಮಾಡಿಕೊಂಡಿದ್ದಾರೆ.

# ಸೋಂಕಿತರ ಸಂಖ್ಯೆ 228 ಕ್ಕೆ ಏರಿಕೆ : 5 ಜನ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆ

ವಿಜಯಪುರ.ಜೂ.13 : ಜಿಲ್ಲೆಯಲ್ಲಿ ಈವರೆಗೆ ಒಟ್ಟು 228 ಕೋವಿಡ್-19 ಪಾಸಿಟಿವ್ ಪ್ರಕರಣಗಳು ದೃಢಪಟ್ಟಿದ್ದು, ಜಿಲ್ಲಾಸ್ಪತ್ರೆಯಲ್ಲಿ 70 ರೋಗಿಗಳು ಕೋವಿಡ್-19 ಪಾಸಿಟಿವ್ ಸಕ್ರಿಯ ರೋಗಿಗಳಾಗಿದ್ದಾರೆ. ಇಂದು ಮತ್ತೆ 6 ಕೋವಿಡ್-19 ಪಾಸಿಟಿವ್ ಪ್ರಕರಣಗಳು ದೃಢಪಟ್ಟಿದೆ ಎಂದು ಜಿಲ್ಲಾಧಿಕಾರಿ ವೈ.ಎಸ್ ಪಾಟೀಲ ಅವರು ತಿಳಿಸಿದ್ದಾರೆ.

ಜಿಲ್ಲೆಯ ಸೋಂಕಿತರಲ್ಲಿ ರೋಗಿ ಸಂಖ್ಯೆ 6584 (50 ವರ್ಷದ ಪುರುಷ) ರೋಗಿ ಸಂಖ್ಯೆ 6585 (21 ವರ್ಷದ ಪುರುಷ) ಇವರಿಗೆ ಮಹಾರಾಷ್ಟ್ರ ಸಂಪರ್ಕದಿಂದ, ರೋಗಿ ಸಂಖ್ಯೆ 6586 (46 ವರ್ಷದ ಪುರುಷ) ರೋಗಿ ಸಂಖ್ಯೆ 6587 (55 ವರ್ಷದ ಪುರುಷ) ರೋಗಿ ಸಂಖ್ಯೆ 6588 (58 ವರ್ಷದ ಪುರುಷ) ಇವರಿಗೆ ಕಂಟೇನ್ಮೆಂಟ್ ಜೋನ್ ಸಂಪರ್ಕದಿಂದ ಹಾಗೂ ರೋಗಿ ಸಂಖ್ಯೆ 6589 (9 ವರ್ಷದ ಬಾಲಕ) ಐಎಲ್‌ಐ ಸಂಪರ್ಕದಿಂದ ಸೋಂಕು ತಗುಲಿರುವುದು ದೃಢಪಟ್ಟಿದೆ ಎಂದು ಅವರು ತಿಳಿಸಿದ್ದಾರೆ.ಅದರಂತೆ ರೋಗಿ ಸಂಖ್ಯೆ 2844 (15 ವರ್ಷದ ಬಾಲಕ) ರೋಗಿ ಸಂಖ್ಯೆ 4827 (58 ವರ್ಷದ ಮಹಿಳೆ) ರೋಗಿ ಸಂಖ್ಯೆ 5980 (9 ವರ್ಷದ ಬಾಲಕ) ರೋಗಿ ಸಂಖ್ಯೆ 5982 (10 ವರ್ಷದ ಬಾಲಕ) ರೋಗಿ ಸಂಖ್ಯೆ 5983 (10 ವರ್ಷದ ಪುರುಷ ಬಾಲಕ) ಸೋಂಕಿನಿಂದ ಗುಣಮುಖರಾಗಿ ಜಿಲ್ಲಾಸ್ಪತೆಯಿಂದ ಬಿಡುಗಡೆ ಆಗಿದ್ದಾರೆ.ಜಿಲ್ಲೆಯಲ್ಲಿ ಈವರೆಗೆ ವಿದೇಶ ಸೇರಿದಂತೆ ಇತರ ಪ್ರದೇಶಗಳಿಂದ 29,492 ಜನರು ಬಂದ ಬಗ್ಗೆ ವರದಿಯಾಗಿದ್ದು, ಇವರ ಮೇಲೆ ತೀವ್ರ ನಿಗಾ ಇಡಲಾಗಿದೆ. ಒಟ್ಟು 228 ಕೋವಿಡ್ -19 ಪಾಸಿಟಿವ್ ಪ್ರಕರಣಗಳು ದೃಢಪಟ್ಟಿದ್ದಾರೆ. 8809 ಜನರು 28 ದಿನಗಳ ಐಸೋಲೇಶನ್ ಅವಧಿ ಪೂರ್ಣಗೊಳಿಸಿದ್ದಾರೆ. 20525 ಜನರು (1 ರಿಂದ 28 ದಿನಗಳ) ರಿಪೋರ್ಟಿಂಗ್ ಅವಧಿಯಲ್ಲಿದ್ದು, ಈವರೆಗೆ ಒಟ್ಟು 6 ಜನ ಕೋವಿಡ್-19 ರೋಗಿಗಳು ಮೃತಪಟ್ಟಿದ್ದಾರೆ. 152 ಜನರು ಕೋವಿಡ್-19 ರೋಗದಿಂದ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದು, 70 ಜನರು ಆಸ್ಪತ್ರೆಯಲ್ಲಿರುವ ಕೋವಿಡ್-19 ಸಕ್ರಿಯ ರೋಗಿಗಳಾಗಿದ್ದಾರೆ. ಈವರೆಗೆ 26887 ಜನರ ಗಂಟಲು ದ್ರವ ಮಾದರಿಯನ್ನು ಸಂಗ್ರಹಿಸಿದ್ದು, 26384 ಜನರ ನೆಗೆಟಿವ್ ವರದಿ ಬಂದಿದೆ. ಇನ್ನೂ 275 ಜನರ ಗಂಟಲು ದ್ರವ ಮಾದರಿ ಪರೀಕ್ಷಾ ವರದಿ ಬರಬೇಕಾಗಿದೆ ಎಂದು ಅವರು ತಿಳಿಸಿದ್ದಾರೆ.

# ಜಿಂದಾಲ್ ಕೋವಿಡ್ ಪ್ರರಣ ಹೆಚ್ಚಳ, ಬಳ್ಳಾರಿ ಜನ ತತ್ತರ

ಬಳ್ಳಾರಿ ಜೂನ್ 13. ಕಳೆದ 4-5 ದಿನಗಳಲ್ಲಿ ತೋರಣಗಲ್ಲು ಪಟ್ಟಣದ ಜಿಂದಾಲ್ ಉಕ್ಕು ಕಾರ್ಖಾನೆಯಲ್ಲಿ ಉದ್ಯೋಗದಲ್ಲಿರುವ ಕಾರ್ಮಿಕರಿಂದ ಬಳ್ಳಾರಿ ಜಿಲ್ಲೆಯಲ್ಲಿ ಕರೋನಾ ಸೋಂಕಿತರ ಸಂಖ್ಯೆ ಗಣನೀಯವಾಗಿ ಏರತೊಡಗಿದೆ. ಪರಿಣಾಮವಾಗಿ ಬಳ್ಳಾರಿ ಜಿಲ್ಲೆಯ ಜನತೆ ಭಯಬೀತರಾಗುವಂತೆ ಮಾಡಿದೆ.ಇತ್ತೀಚೆಗೆ ಜಿಂದಾಲ್ ಕಾರ್ಖಾನೆಯ ಮೂಲದಿಂದ ದಿಢೀರನೆ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವುದನ್ನು ಗಮನಿಸಿದರೆ, ಜಿಂದಾಲ್ ಕಂಪನಿಯ ಆಡಳಿತವು ಅಗತ್ಯ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ.ಜಿಂದಾಲ್ ಉಕ್ಕಿನ ಕಾರ್ಖಾನೆ ಭಾರತದಲ್ಲಿಯೇ ಒಂದು ಬೃಹತ್ ಕಾರ್ಖಾನೆಯಾಗಿದ್ದು, ಅವರದೇ ಆದ 100 ಹಾಸಿಗೆಯುಳ್ಳ ಸುಸಜ್ಜಿತವಾದ ಆಸ್ಪತ್ರೆಯನ್ನು ಹೊಂದಿದೆ.

ಕಾರ್ಖಾನೆ ಆಡಳಿತವು, ಸೋಂಕಿತರು ಹೆಚ್ಚಿರುವ (ಕೆಂಪು ವಲಯ) ಕಡೆಗೆ ಹೋಗಿ ಬಂದಿರುವ ಸಿಬ್ಬಂದಿಯನ್ನು ಪರೀಕ್ಷಿಸಿ, ಒಂದುವೇಳೆ ಸೋಂಕಿತರಾಗಿದ್ದಲ್ಲಿ ತಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುವ ಸೌಲಭ್ಯ ಮಾಡಬಹುದು.

ಇಲ್ಲವಾದಲ್ಲಿ ಕ್ವಾರಂಟೈನ್ ಮಾಡಬಹುದು. ಈ ನಿಟ್ಟಿನಲ್ಲಿ ಜಿಲ್ಲಾಡಳಿತವು ಕಾರ್ಖಾನೆ ಆಡಳಿತಕ್ಕೆ ಸೂಕ್ತ ಆದೇಶ ನೀಡುವ ಅಗತ್ಯವಿದೆ. ಈ ಸಂದರ್ಭದಲ್ಲಿ ಜಿಂದಾಲ್ ಆಡಳಿತವು ಸುತ್ತಮುತ್ತಲಿನ ಹಳ್ಳಿಗಳಿಗೆ ಸೋಂಕು ಹರಡುವುದನ್ನು ತಡೆಯಲು, ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಅವಶ್ಯಕತೆ ಇದ್ದಲ್ಲಿ ಲಾಕ್‌ಡೌನ್ ಮಾಡಬೇಕು. ಇಲ್ಲಿಯವರೆಗೆ ಸೋಂಕಿತರಾದವರಿಗೆ ಸೂಕ್ತ ಚಿಕಿತ್ಸೆ ಸೌಲಭ್ಯಗಳನ್ನು ಒದಗಿಸಬೇಕು ಹಾಗೂ ಜಿಂದಾಲ್ ಆವರಣದಲ್ಲಿರುವ ಎಲ್ಲಾ ಗುತ್ತಿಗೆ ಕಂಪನಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಒಂದುವೇಳೆ ಕೆಲಸ ಸ್ಥಗಿತಗೊಳಿಸಿ ಊರಿಗೆ ಕಳುಹಿಸಿದ್ದರೆ, ಪುನಃ ಕೆಲಸ ಆರಂಭ ಮಾಡುವತನಕ ಪೂರ್ಣ ಸಂಬಳ ನೀಡಬೇಕೆಂದು ಎ.ಐ.ಯು.ಟಿ.ಯು.ಸಿ., ಬಳ್ಳಾರಿ ಜಿಲ್ಲಾ ಸಮಿತಿ ಆಗ್ರಹಿಸುತ್ತದೆ. ಹಾಗೂ ಜಿಲ್ಲೆಯಲ್ಲಿ ಸೋಂಕಿತರ ಸಂಖ್ಯೆಯನ್ನು ನಿಯಂತ್ರಣ ಮಾಡಲು ಹಾಗೂ ಸೋಂಕು ಉಲ್ಬಣಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಅಗತ್ಯ ಚಿಕಿತ್ಸೆ, ವೈದ್ಯಕೀಯ ಸೌಲಭ್ಯ, ಪರೀಕ್ಷೆಗಳನ್ನು ಮಾಡಲು ಬಳ್ಳಾರಿ ಜಿಲ್ಲಾಡಳಿತವು ಯುದ್ಧೋಪಾದಿಯಲ್ಲಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಎ.ದೇವದಾಸ್. ಎ.ಐ.ಯು.ಟಿ.ಯು.ಸಿ., ಬಳ್ಳಾರಿ. ಅಗ್ರಹಿಸುತ್ತದೆ ಎಂದು ತಿಳಿಸಿದರು.